Regd No BG 155

Sri "SATYAVADI"
— DAILY —
MYSORE 4
46 th Year

Protect the cow

— ಶ್ರೀ —

ಸತ್ಯವಾದಿ
SATYAVADI

ಸ್ಥಾಪಕರು— ಅರಮನೆ ಸಿಂಪ್ಲೇದಾರ್ ಎಂ. ಎ ಸುಬ್ಬರಂತಯ್ಯರು [ಬಿಡಿ ಪ್ರತಿ 3 ಪೈ

9—1—1962

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ಭಾರತೀಯರ ವ್ಯಾಪಾರ ಪಾಕಿಸ್ತಾನದವರಿಗೆ ವರ್ಗಾವಣೆ

ಶಿಶುಗಳ ಮರಣ ಹೆಚ್ಚಿದೆ ಸರ್ಕಾರದೊಡನೆ ಸಾಲಾ

ವೈಸೂರು ಪೌರಸಭೆಯ ಮುಂದು ವರಿದ ಸಭೆ ಪೌರಸಭಾಧ್ಯಕ್ಷರಾದ ಶ್ರೀ ಹಬ್ಬ. ಕೆಂಪೆ ಗೌಡರು ಅಧ್ಯಕ್ಷತೆಯಲ್ಲಿ ನಿನ್ನೆ ಸೇರಿದ್ದಿತು.

ಶ್ರೀ ಸಿ ಶಿವರಾಮಶೆಟ್ಟರು ಮಾತನಾಡಿ, ನೀರು ಕಂದಾಯ ವಸೂಲಾತಿ ನೋಟೀಸು ಕಳಿಸುವುದಂಲ್ಲಿ ಅನೇಕ ಸಂದರ್ಭಗಳಲ್ಲಿ ಸರಿಯಾಗಿಂದ ಜನರಿಗೆ ತೊಂದರೆ ಆಗಿದೆ, ಈ ಬಗ್ಗೆ ಗಮನಕೊಡಬೇಕು ಎಂದರು.

ಶ್ರೀ ಸೋಮಸುಂದರ ಶರ್ಮರವರು ಮಾತನಾಡಿ, ಶಿಶುಗಳ ಮರಣ ಸಂಖ್ಯೆ ವೈಸೂರು ನಗರದಲ್ಲಿ ಹೆಚ್ಚಾಗಿದೆ, ಈ ವಿಷಯದಲ್ಲಿ ಗವನವೀಯುವಂತೆ ಸಂಖ್ಯಾಂಕ್ಕೆ ಬರೆಯುಜೇಕು ಎಂದರು.

ಅರಶಂಕೆ ಅತಿಸಾರ ನೊಣಗಳ ವಾಲಕ ಹರಡುವದು, ಅದ್ದರಿಂದ ಹೋಟಲುಗಳ ಶುಚಿತ್ವದ ಕಡೆ ಗವನ ಕೊಡಬೇಕು ಎಂದರು.

ಶ್ರೀ ಎ ಕೃಷ್ಣಮೂರ್ತಿಂಗಾಯರು ಮಾತನಾಡಿ, ವರ್ಕ್ಸ ಸಮಿತಿ ಹಿಂದೆ ಮಾಡಿರುವ ಕೆಲಸಗಳು ಏಗಿಯೇ ಇರುವುದಿಲ್ಲ ಏನು ಕಾರಣವೋ ಗೆ ತಿಲ್ಲ? ಪೌರಸಭೆ ಎ 32 ಸದಸ್ಯರ ಬಗ್ಗೆ ಒಂದೇ ಧೋರಣೆಯಿಂದ ವರ್ತಿಸಬೇಕು ಎಂದರು

ಗೃಹಪತಿಗಳು ಇಂದಿನ ಕಡೆ ಅಂಗಡಿಗಳಿಗೆ ಲೈಸನ್ಸುಗಳನ್ನು ಕೊಡುವದು ಸರಿಯಲ್ಲ, ಆ ರೀತಿ ಕೊಡುವುದರಿಂದ ಹೆಂಗಸರು ವಕ್ಕಳು ಓಡಾಡಲು ತೊಂದರೆ ಆಗುವುದು ಎಂದು ಅವರು ನುಡಿದರು.

ಂಂ

ಈ ಸಾಹೆ ಕೊನೆಯೊಳಗೆ ದಕ್ಷಿಣ ವಲಯ ಪೋಲೀಸು ಒಲ ನಿರ್ಮಿತವಾಗುವುದು.

ಅಷ್ಟಗ್ರಹಕೂಟದ ಪ್ರಯೋಜನ

ಮುಂದಿನ ಮಾಘ ಅಷ್ಟಗ್ರಹ ಕೂಟ ಸೇರಿ ಪ್ರಳಯವಾಗಬಹುದೆಂಬ ಜ್ಯೋತಿಷ ಅನುಕೂಲವನ್ನು ನೆಪಮಾಡಿಕೊಂಡು ಸಮಾಜ ಘಾತಕ ಶಕ್ತಿಗಳು ಪಡೆಯುತ್ತಿವೆ, ಪ್ರದಾರ್ಥಗಳ ಬೆಲೆ ಏರುತ್ತಿದೆ ಡೇಂಜರ ಗಳಲ್ಲಿ ಸ್ಥಳಾವಕಾಶವನ್ನು ದುಬಾರಿ ಬೆಲೆಗೆ ಕೊಡಲಾಗುವ ಸೂಚನೆ ಮಾಡಲಾಗಿದೆ

ಹಿಂದೂಮಹಾಸಭೆ ನೀತಿ

ಹಿಂದೂಮಹಾಸಭೆಗೆ ಕಿಶ್ಚಿಯರ್ನರು ಹಾಗೂ ಮುಸಲ್ಮಾನರು ಸೇರುವದು ಸಾಧ್ಯವಿಲ್ಲವೆಂದೂ, ಚುನಾವಣೆಯಲ್ಲಿ ಸ್ಪರ್ಧಿಸಲು ಅವರಿಗೆ ಮಹಾಸಭೆ ಟಿಕೆಟ್ ಕೊಡುವದಾಗಿ ಶಿವಮೊಗ್ಗಾದಲ್ಲಿ ಅಖಿಲ ಭಾರತ ಹಿಂದೂಮಹಾಸಭೆಯ ಉಪಾಧ್ಯಕ್ಷ ಶ್ರೀ ನಿತ್ಯ ನಾರಾಯಣ ಬ್ಯಾನರ್ಜಿಯವರು ನಿನ್ನೆ ಶಿವಮೊಗ್ಗಾದಲ್ಲಿ ತಿಳಿಸಿದರು.

★

ಚೀನಾ ಹಾಗೂ ಪಾಕಿಸ್ತಾನಗಳಿಂದ ಅಕ್ರಮವಾಗಿ ಅಕ್ರಮಣವಾಗಿರುವ ಭಾರತದ ಭೂ ಪ್ರದೇಶವನ್ನು ಏನೋ ಚನೆ ಮಾಡಲು ಭಾರತ ನಿರ್ಧರಿಸಿದೆ ಎಂಬುದಾಗಿ ರಕ್ಷಣಾ ಮಂತ್ರಿ ಶ್ರೀ ವಿ. ಕೆ. ಕೃಷ್ಣಮೆನನ್ ಡಾಜಲಿಂಗಿನಲ್ಲಿ ಸಾರ್ವಜನಿಕ ಸಭೆಯಲ್ಲಿ ತಿಳಿಸಿದರು.

ಂಂ

ಜಯ್ಪುರಕ್ಕೆ ಬಂದಿಳಿದ ವಾರ್ತೆಯ ಪ್ರಕಾರ ಅಲ್ವಾರ ಜಿಲ್ಲೆಯ ಬಹದ್ದೂರ ಪುರ ಗ್ರಾಮದಲ್ಲಿ ಜೈಸಿಂಗ್ 9 ಮಂದಿಯನ್ನು ಗುಂಡಿಟ್ಟುಕೊಂದಿರುವನು ಕೊಲೆಪಾತಕ ಪತ್ತೆ ಇಲ್ಲ

ಪೋರ್ಚುಗೀಸು ಪೂರ್ವ ಆಫ್ರಿಕದ ವ್ಯಾಪಾರವನ್ನು ಭಾರತೀಯರ ವರ್ಗಾವಣೆ

ಪೋರ್ಚುಗೀಸು ಪೂರ್ವ ಆಫ್ರಿಕದ ಮೊಸಾಂಬಿಕನಲ್ಲಿ 2 ವರೆ ಶತಕದ ಭಾರತೀಯರನ್ನು ನಿರ್ಬಂಧದಲ್ಲಿಟ್ಟಿದೆ. ಪೋರ್ಚುಗೀಸು ಪೂರ್ವ ಆಫ್ರಿಕಾದಲ್ಲಿ ಭಾರತೀಯರ ವ್ಯಾಪಾರವನ್ನು ಪಾಕಿಸ್ತಾನಿಗಳಿಗೆ ವರ್ಗಾವಣೆ ಮಾಡಿದೆ.

ಸಾಮಾನ್ಯನೊಡನೆ ರಾಜಕುಮಾರಿ ವಿವಾಹ

ವಿಖ್ಯಾತವಾದ ಮಾಜಿ ಚಕ್ರವರ್ತಿಯವರ 23 ವರ್ಷದ ರಾಜಕುಮಾರಿ ಫೌಂಗ್ ಲೀ 23 ವರ್ಷದ ಬ್ಯಾಂಕಿನ ನೌಕರ ಬರ್ನಾಡ್ ಸೌಲಾಂಜ್ ಫ್ರಾನ್ಸಿನ ಬ್ರಿವ್‌ನಲ್ಲಿ ವಿವಾಹವಾದರು.

ಅಡ್ಡಿ ಬರುವುದಿಲ್ಲ

ಭಾರತಕ್ಕೆ ಅಮೆರಿಕಾ ನೆರವನ್ನು ನೀಡುವ ಬಗ್ಗೆ ಗೋವಾ ವಿಮೋಚನೆ ಕಾರ್ಯಾಚರಣೆ ಅಡ್ಡಿ ಬರುವುದಿಲ್ಲವೆ ದು ಅಮೆರಿಕದ ಸಂಸ್ಥಾನ ಕಾರ್ಯದರ್ಶಿ ಡೀನ್ ರಸ್ಕ್ ತಿಳಿಸಿದರು

ಸ್ವತಂತ್ರ ಪಕ್ಷದ ನೀತಿ

ಸ್ವತಂತ್ರ ಪಕ್ಷ ಮುಂದುಬರುತ್ತಿರುವ ರೀತಿ ನೋಡಿದರೆ ದೆಹಲಿಯಲ್ಲಿ ರಾಜನ ಸ್ಥಾಪನೆ ಆಗುವದಾಗಿ ಪಂಡಿತ ನೆಹರು ತಿಳಿಸಿದರು.

ಂಂ

ಸಾಲಿಕ ಪೀಕ್' ಎಂದು ಹೆಸರುಗೊಂಡಿದ್ದ ಶಿಖರ ಈಗ ಸೋವಿಯಟ್ ಪೀಕ್' ಎಂದು ಹೆಸರುಗೊಂಡಿದೆ ಎಂದು ನಾಸ್ಕೋ ವಾರ್ತೆ.

ಅಧ್ಯಕ್ಷ ಸುಕಾರ್ನೋರವರ ಪ್ರಾಣಾಪಹಾರ ಪ್ರಯತ್ನ ನಡೆಯಿತು

ಶಾಂತಿಕವಲ್ಲದ ಶಿಕ್ಷಣಗಳನ್ನು ಭಾರತೀಯ ಭಾಷೆಗಳಲ್ಲಿ ಕಲಿಯಬೇಕೆಂದು ಯೋಜನಾ ಸಮಿತಿ ಸದಸ್ಯ ಶ್ರೀ ಶ್ರೀಮನ್ನಾರಾಯಣರು ಜೋಧಪುರದಲ್ಲಿ ತಿಳಿಸಿದ್ದಾರೆ.

ನಷ್ಟಕ್ಕೆ ಕೊಡಬೇಕಾದ ಪರಿಹಾರ

ಸಾಗಣಿಕೆಯಲ್ಲಿ ಪದಾರ್ಥಗಳು ನಷ್ಟವಾಗುವುದರಿಂದ ರೈಲ್ವೆಯವರು ಕೊಡಬೇಕಾದ ಪರಿಹಾರ ಹೆಚ್ಚಾಗುತ್ತಾ ಬರುತ್ತಿದೆ ಎಂದು ನವದೆಹಲಿ ವಾರ್ತೆ. 1959-60 ನೆಯ ಸಾಲಿನಲ್ಲಿ ಇದಕ್ಕಾಗಿ 3 ಕೋಟಿ 74 ಲಕ್ಷ ರೂ. ಇದಕ್ಕಾಗಿ ವೆಚ್ಚಮಾಡಿದೆ 60-61 ನೆಯ ಸಾಲಿನಲ್ಲಿ ಈ ವೆಚ್ಚದಲ್ಲಿ ರೂ. 1 ಲಕ್ಷ ಕಡಿಮೆ ಆಗಿದೆ.

ಂಂ

ವೈಸೂರಿನ ಡಿವಿಜನಲ್ ಕವಿಮಾಪನ ನರ್ ಶ್ರೀ ಬಿ ಬೀಂಪ್ಪನವರ ಅಧ್ಯಕ್ಷತೆಯಲ್ಲಿ ನಿನ್ನೆ ಜಗದ್ಗುರು ಶ್ರೀಶಿವರಾತ್ರೀಶ್ವರ ಜಯಂತಿ ಮಹೋತ್ಸವ ಕಾರ್ಯಕ್ರಮಗಳ ಸಂವೇದವು ನಗರ ನ್ಯಾಯಾಧೀಶರಾದ ಶ್ರೀ ಆರ್ ಬಿ ನಾಯಕ್ ರವರು ಭಾಷಣ ಮಾಡುವರು.

ವೈಸೂರ ನಗರದಲ್ಲಿ ಜಟಕಾಸ್ಟಾಂಡಿಗೆ ಸ್ಥಳವಿಲ್ಲವೆಂದು ಗಾಡಿಯವರು ಪೌರಸಭೆ ಅಧ್ಯಕ್ಷರು ಹಾಗೂ ಸದಸ್ಯರನ್ನು ಸಂದರ್ಶಿಸಲು, ಈ ದಿನ ತೀರ್ಮಾನಕ್ಕೆ ಬರುವ ಭರವಸೆಯನ್ನು ಅವರು ಇತ್ತಿದ್ದಾರೆ

ವ್ಯಾಪಾರ-ವಾಣಿಜ್ಯ ರೈಲ್ವೆಯ ಉದ್ಘಾಟನೆಯನ್ನು ಪುಡುಚ್ಚೇರಿಯ ಮುಖ್ಯಮಂತ್ರಿ ಶ್ರೀ ಕಾಮರಾಜನಾಡಾರ್ರವರು ಉದ್ಘಾಟಿಸಿದರು.

ಜಮ್ಮು-ಕಾಶ್ಮೀರ ಪ್ರಜಾಪರಿಷತ್ತು ತನ್ನ ಜುನಾವಣಾ ಪ್ರಣಾಳಿಕೆಯಲ್ಲಿ ಸಹಕಾರ ವ್ಯವಸಾಯವನ್ನು ಏರೋದಿಸಿದೆ

ಸಾಳೆಯ ಪಂಚಾಂಗ

ಅನ್ನಾನ ಮಹಾವಿದ್ವಾ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಪಂಪಶ್ಯಾಸ್ತ್ರಜ್ಯೋಯಿಸರಂದ
10 ಚೌತಿ ಶತಭಿಷ

ಓಟುದಾರರ ಸಮ್ಮೇಳನ

ಮದ್ರಾಸಿನಲ್ಲಿ ನೊಂದ್ಣಿ ಓಟುದಾರರ ಸಮ್ಮೇಳನ ಸೇರಿದ್ದಿತು. ಕುಂದ್ರಕುಡಿ ವರ್ತಕರ ಮುಖ್ಯಾಧಿಪತಿಯಾಗಿದ್ದ ಕುಂದ್ರಕುಡಿ ಅಡಿಗಲಾರ್ ಅಧ್ಯಕ್ಷತೆ ವಹಿಸಿದ್ದರು. ಈಗ ನಡೆದ ತಮಿಳುನಾಡು ಓಟುದಾರರ ಸಮ್ಮೇಳನವನ್ನು ದ್ರವಿಡ ಕಳಗಂನವರು ಏರ್ಪಡಿಸಿದ್ದರು. ಅಡಿಗಲಾರ್‌ರವರು ಭಾಷಣಮಾಡುತ್ತ, ಓಟುಗಳನ್ನು ಕೊಳ್ಳುವುದು ಅಥವಾ ಮಾರುವುದು ಪ್ರಜಾಸ್ವಭುತ್ವ ತತ್ವಕ್ಕೆ ವಿರೋಧ. ಜಾತಿ ಅಥವಾ ಕೋಮು ಭಾವನೆಯ ಮೇಲೆ ಓಟು ಮಾಡುವುದು ಕೂಡ ತಪ್ಪು ಎಂದು ಅವರು ನುಡಿದರು. ಅಖಿಲ ಭಾರತ ಮುಸ್ಲಿಂ ಲೀಗಿನ ರಾಜ್ಯ ಸಮಿತಿ ಅಧ್ಯಕ್ಷರಾದ ಶ್ರೀ ಮಜೀದರು ಮಾತನಾಡಿ ಯಾವ ಪಕ್ಷ ಒಳ್ಳೆಯದು ಮಾಡುವದಾಗಿ ತಮ್ಮ ಸದಸ್ಯರಿಗೆ ಅನ್ನಿಸುವದೋ ಅದಕ್ಕೆ ವಚನೀಡಲು ಅವಕಾಶ ಕೊಡುವದಾಗಿ ನುಡಿದರು. ಚುನಾವಣೆಯಲ್ಲಿ ಕೋಮು ವಿಷಯ ಇದರ ಪಾತ್ರ ಹೆಚ್ಚಾಗಿರುವದರಿಂದ ತಮ್ಮ ಪಕ್ಷ ಸ್ಪರ್ಧಿಸುವದಿಲ್ಲವೆಂದು ತಮಿಳರಸು ಕಳಗಂನ ಶ್ರೀ ಪರೀಕ್ಷು ನುಡಿದರು. ಕಾರ್ಯಕ್ರಮವನ್ನು ಮುಕ್ತಾಯಗೊಳಿಸುತ್ತ ದ್ರವಿಡ ಕಳಗಂ ನಾಯಕರಾದ ಶ್ರೀ ಇ. ವಿ. ರಾಮಸ್ವಾಮಿ ನಾಯಕರ್‌ರವರು ಮಾತನಾಡಿ, ಓಡುದಾರರು ಎಚ್ಚರಿಕೆಯಿಂದ, ಒಳ್ಳೆಯದು ಮಾಡುವ ಪಕ್ಷಕ್ಕೆ ಓಟುಮಾಡಬೇಕು ಎಂದರು.

೦೦

ಕೆಲಸದ ಉತ್ತಮ ಪರಿಸ್ಥಿತಿ ಮತ್ತು ತಮ್ಮ ಸಂಘಕ್ಕೆ ಮಾನ್ಯತೆ ಅಪೇಕ್ಷೆ ಮಾಡಿ ದಕ್ಷಿಣ ಕಲ್ಕತ್ತಾದ ಚಿತ್ರಂಜನ ಸೇವಾಸದನ ಮತ್ತು ಕ್ಯಾನ್ಸರ್ ಸಂಸ್ಥೆಯ ಇಬ್ಬರು ನೌಕರರು ಉಪವಾಸವನ್ನು ನಿನ್ನೆ ಆರಂಭಿಸಿದರು.

ಭಾಗಲ್ಪುರದಿಂದ ಕಳಿಸಿದ ಅಂಚೆ ಚೀಲ ಪತ್ತೆ. ರೂ 1 ಸಹಸ್ರ ಧನ ಬಾದು ಸೇರಿದಾಗ ಪತ್ತೆ ಇರಲಿಲ್ಲ.

ಪಂಜಾಬಿನಲ್ಲಿ ನ್ಯಾಯ ಹಾಗೂ ಸ್ವತಂತ್ರವಾಗಿ ಚುನಾವಣೆ ನಡೆಯಲು ರಾಜ್ಯಪಾಲರು ಅಡಳಿತ ಬರುವಂತೆ ಅಕಾಲಿದಳ ನಾಯಕ ಮಾ|| ತಾರಾಸಿಂಗರು ಅಮೃತಸರದಲ್ಲಿ ನಿನ್ನೆ ತಿಳಿಸಿದರು.

ಆಯುಧಪಾಣಿ ನೇಪಾಳಿ ಕಾಂಗ್ರೆಸಿಗರು ಮಾನಿಭಾಜಂಗ, ಪಶುಪತಿನಾಥ ಮತ್ತು ಗೋರ್ಕ ಪೋಲೀಸು ಚೆಕ್‌ಪೋಸ್ಟುಗಳನ್ನು ವಶಪಡಿಸಿಕೊಂಡರು. ನೇಪಾಳಿ ಸೇನೆಗಳು ವಶಪಡಿಸಿಕೊಂಡರು

ವುಡ್‌ಲ್ಯಾಂಡ್ಸ್ ಜನಪ್ರಿಯ 5 ನೇ ವಾರ

ಜಬ್ ಪ್ಯಾರ್ ಕಿಸೀಸೆ ಹೋತಾಹೈ

ದೇವ್‌ಆನಂದ್, ಅಶಾ ಪಾರೆಖ್ ಮತ್ತಿಂ ಪ್ರಖ್ಯಾತ ತಾರೆಯರು ನಾಶ್ರವಹಿಸಿರುವ

ಅತ್ಯಂತ ವಿನೋದಮಯ ಹಿಂದಿ ಚಿತ್ರ [ದಿನವಹಿ 3 ಪ್ರದರ್ಶನಗಳು

ಅಪೆರಾ— ಜನಭರಿತ 2 ನೇ ವಾರ

ನಾಗಾರ್ಜುನ (ಕನ್ನಡ)

ತಾರಾಗಣ— ರಾಜಕುಮಾರ್, ನಾಗಯ್ಯ, ವರಲಕ್ಷ್ಮಿ, ಹರಿಣಿ, ನರಸಿಂಹರಾಜು

ಕಾಂತಾ ರಾವ್, ರಾಜನಾಲ [ದಿನವಹಿ 3 ಆಟಗಳು]

SHAKTI
SUDHA
A Superb Tonic

ಅಮೆರಿಕದ ವಿದ್ಯಾರ್ಥಿ ಜೀವನವನ್ನು
ಕುರಿತ ಚಿತ್ರಗಳ ಪ್ರದರ್ಶನ

★ ವಿದ್ಯಾರ್ಥಿಗಳ ಸ್ನೇಹ ಜೀವನ
ಅವರ ಯೋಗಕ್ಷೇಮಕ್ಕೆ ಸಲ್ಲುವ ಲಕ್ಷ್ಯ

★ ವಿದ್ಯಾರ್ಥಿ-ಉಪಾಧ್ಯಾಯರುಗಳ ನಡುವಿನ
ಅನೌಪಚಾರಿಕ ಸಂಬಂಧ

★ ವಿದ್ವತ್ಸಾಧನೆಗೆ ಸಲ್ಲುವ ಮಹತ್ವ

★ ವಿದ್ಯಾರ್ಥಿಗಳೇ ಏರ್ಪಡಿಸುವ ಸಹಕಾರ

★ ಪಾಠೇತರ ಚಟುವಟಿಕೆಗಳ ವಿಸ್ತಾರ ವೈವಿಧ್ಯ

ಇಂಥಹ ಅಮೆರಿಕದ ವಿದ್ಯಾರ್ಥಿಗಳ ಜೀವನದ
ನಾನಾ ಮುಖಗಳನ್ನು ನಿರೂಪಿಸುವ ಪ್ರದರ್ಶನ

1962 ರ ಜನವರಿ 6 ರಿಂದ 11 ರ ವರೆಗೆ
ಮೈಸೂರಿನಲ್ಲಿ ನಡೆಯುತ್ತದೆ

ಎಲ್ಲರಿಗೂ ಆದರದ ಸ್ವಾಗತ

ಸ್ಥಳ
ಮಹಾರಾಜಾ ಕಾಲೇಜ್ ಯೂನಿಯನ್
ಕಾಲ
ಬೆಳಿಗ್ಗೆ 9 ರಿಂದ 12 : ಸಂಜೆ 4 ರಿಂದ 8

USG-1

THE DIFFERENCE BETWEEN THIS...

TRADE I.T.L. MARK

AND THIS... IS ALWAYS THIS...

GRIPE SYRUP I.T.L.
For digestive disorders of children.

THE MYSORE INDUSTRIAL & TESTING LABORATORY LTD., BANGALORE-3.
Madras Sales Office:- 35/37, THAMBU CHETTY STREET, MADRAS-1.

Our Bangalore Sales Depot address—
71/4 Arcot Sreenivasachar St., Bangalore 2.

Help 'The Gorakshana'

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

"ಗೋರಕ್ಷಣ" ಪತ್ರಿಕೆಗೆ ಬೆಂಬಲಿಗರಾಗಿರಿ

Edited, Printed & Published by the Proprietor, Dharma Prachara Nirata M. S. Krishna Rao. at the Satyavadi Press Chamarajapuram, Mysore 4.